**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 90/2020**

**ಚಾ.ಸಾಃ 25, ಫ್ರಾ.ಸಾಃ 13**

| | |
|---|---|
| ಸಾಕ್ಷಿದಾರನ ಹೆಸರು | ಶ್ರೀಧರ ಎಸ್. ಆರ್. |
| ತಂದೆಯ ಹೆಸರು | ರಾಮಚಂದ್ರಮೂರ್ತಿ |
| ವಯಸ್ಸು | 42 ವರ್ಷಗಳು |
| ಉದ್ಯೋಗ | ಪೋಲೀಸ್ ನಿರೀಕ್ಷಕರು, ಪೋಲೀಸ್ ತರಬೇತಿ ಶಾಲೆ, ಕಡೂರು |
| ವಾಸ್ತವ್ಯ | ಕಡೂರು |

**ಸಾಕ್ಷಿಯನ್ನು ದಿನಾಂಕಃ 24-10-2024 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನಾನು ಅಕ್ಟೋಬರ್-2020 ರಿಂದ ಜನವರಿ-2023 ರ ವರೆಗೆ ಹೊನ್ನಾವರ ವೃತ್ತದಲ್ಲಿ ವೃತ್ತ ನಿರೀಕ್ಷಕನಾಗಿ ಕೆಲಸ ಮಾಡಿರುತ್ತೇನೆ.

ಈ ಪ್ರಕರಣದ ಕಡತವನ್ನು ದಿನಾಂಕಃ **03-10-2020** ರಂದು ಚಾಸಾ-21 ರವರಿಂದ ಪಡೆದು ಪರಿಶೀಲಿಸಿ ಮುಂದಿನ ತನಿಖೆಯನ್ನು ಕೈಗೊಂಡಿರುತ್ತೇನೆ.

ದಿನಾಂಕ 10-10-2020 ರಂದು ಘಟನಾ ಸ್ಥಳದ ಉತಾರ ಪೂರೈಸುವಂತೆ ಕಲ್ಲೆ ಗ್ರಾಮದ ಪಿಡಿಒ ರವರಿಗೆ ಪತ್ರ ಬರೆದಿರುತ್ತೇನೆ. ಸದರಿ ಪತ್ರವನ್ನು ಈಗ ನೋಡುತ್ತಿದ್ದು ನಿಪಿ-25 ಎಂದು, ಸಾಕ್ಷಿಯ ಸಹಿಯನ್ನು ನಿಪಿ-25(ಎ) ಎಂದು ಗುರುತಿಸಲಾಯಿತು.

ದಿನಾಂಕ 11-10-2020 ರಂದು ಘಟನಾ ಸ್ಥಳದ ನಕಾಶೆ ತಯಾರಿಸಿಕೊಡುವಂತೆ ಪಿಡಬ್ಲುಡಿಯ ಎಇಇ ರವರಿಗೆ ಪತ್ರ ಬರೆದಿರುತ್ತೇನೆ. ಈಗ ನೋಡುತ್ತಿದ್ದು ನಿಪಿ-26 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-26(ಎ) ಎಂದು ಗುರುತಿಸಲಾಯಿತು.

ದಿನಾಂಕ 20-10-2020 ರಂದು ಕುಮಟಾ ಶಾಖೆಯ ಮಣಪುರಂ ಫೈನಾನ್ಸರವರಿಗೆ ಆರೋಪಿತರು ಚಿನ್ನಾಭರಣಗಳನ್ನು ಅಡವಿಟ್ಟ ಬಗ್ಗೆ ದಾಖಲೆ ಪೂರೈಸುವಂತೆ ನೋಟೀಸು ನೀಡಿರುತ್ತೇನೆ. ಸದರಿ ನೋಟೀಸಗಳನ್ನು ಈಗ ನೋಡುತ್ತಿದ್ದು ನಿಪಿ-27 ಮತ್ತು 28 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-27(ಎ) ಮತ್ತು 28(ಎ) ಎಂದು ಗುರುತಿಸಲಾಯಿತು.

ದಿನಾಂಕ 24-10-2020 ರಂದು ಕುಮಟಾ ಶಾಖೆಯ ಮಣಪುರಂ ಫೈನಾನ್ಸನವರು ಒಂದು ಪತ್ರದ ಮೂಲಕ ಗುರುತಿನ ಚೀಟಿ, ಇನ್ವೆಂಟರಿ, ಗ್ರಾಹಕರ ಪಟ್ಟಿ ಮತ್ತು ಚಿನ್ನಾಭರಣಗಳನ್ನು ಅಡವಿಟ್ಟ ದಾಖಲೆಗಳನ್ನು ಪೂರೈಸಿರುತ್ತಾರೆ. ಅವುಗಳನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ಸದರಿ ಪತ್ರವನ್ನು ನೋಡುತ್ತಿದ್ದು ನಿಪಿ-29 ಎಂದು, ಸಾಕ್ಷಿಯ ಸಹಿಯನ್ನು ನಿಪಿ-29(ಎ) ಎಂದು ಗುರುತಿಸಲಾಯಿತು.

ಚಿನ್ನಾಭರಣಗಳನ್ನು ಗಿರವಿ ಇಟ್ಟ ಬಗ್ಗೆ ಹಾಜರುಪಡಿಸಿದ ದಾಖಲೆಗಳನ್ನು ಒಟ್ಟಾರೆಯಾಗಿ ನಿಪಿ-30 ಎಂದು ಗುರುತಿಸಲಾಯಿತು. (ನಿಪಿ-30 ರ ದಾಖಲೆ 9 ಹಾಳೆಗಳನ್ನು ಒಳಗೊಂಡಿರುತ್ತದೆ.)

ಅದೇ ದಿನ ಕುಮಟಾ ನೆಲ್ಲಿಕೇರಿ ಶಾಖೆಯ ಮಣಪುರಂ ಫೈನಾನ್ಸನವರು ಒಂದು ಪತ್ರದ ಮೂಲಕ ಆಧಾರ ಕಾರ್ಡ, ಇನ್ವೆಂಟರಿ, ಗ್ರಾಹಕರ ಪಟ್ಟಿ ಮತ್ತು ಚಿನ್ನಾಭರಣಗಳನ್ನು ಅಡವಿಟ್ಟ ದಾಖಲೆಗಳನ್ನು ಪೂರೈಸಿರುತ್ತಾರೆ. ಅವುಗಳನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ಸದರಿ ಪತ್ರವನ್ನು ನೋಡುತ್ತಿದ್ದು ನಿಪಿ-31 ಎಂದು, ಸಾಕ್ಷಿಯ ಸಹಿಯನ್ನು ನಿಪಿ-31(ಎ) ಎಂದು ಗುರುತಿಸಲಾಯಿತು. ಚಿನ್ನಾಭರಣಗಳನ್ನು ಗಿರವಿ ಇಟ್ಟ ಬಗ್ಗೆ ಹಾಜರುಪಡಿಸಿದ ದಾಖಲೆಗಳನ್ನು ಒಟ್ಟಾರೆಯಾಗಿ ನಿಪಿ-32 ಎಂದು ಗುರುತಿಸಲಾಯಿತು. (ನಿಪಿ-32 ರ ದಾಖಲೆ 13 ಹಾಳೆಗಳನ್ನು ಒಳಗೊಂಡಿರುತ್ತದೆ.)

ದಿನಾಂಕ 06-11-2020 ರಂದು ಅದೇ ದಿನ ಕಡ್ಲೆ ಗ್ರಾಮಪಂಚಾಯತಿಯ ಪಿಡಿಒ ರವರು ಘಟನಾ ಸ್ಥಳದ ಪ್ರಮಾಣಪತ್ರ ನೀಡಿರುತ್ತಾರೆ. ಅದನ್ನು ನಿಪಿ-33 ಎಂದು ಗುರುತಿಸಲಾಯಿತು.

ದಿನಾಂಕ 09-11-202 ರಂದು ಪಿಡಬ್ಲುಡಿಯ ಎಇಇ ರವರು ಒಂದು ಪತ್ರ ಮತ್ತು ಸ್ಥಳದ ಕಚ್ಚಾ ನಕಾಶೆಯನ್ನು ಪೂರೈಸಿರುತ್ತಾರೆ. ಈಗ ಅವುಗಳನ್ನು ನೋಡುತ್ತಿದ್ದು ನಿಪಿ-34 ಮತ್ತು 35 ಎಂದು ಗುರುತಿಸಲಾಗಿಯಿತು. ತನಿಖೆ ಪೂರೈಸಿ ಆರೋಪಿತರ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿ. ಎಂ. ಭಂಡಾರಿಯವರಿಂದಃ**

ನಾನು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿರುವುದಿಲ್ಲ. ಮಣಪುರಂ ಫೈನಾನ್ಸನವರು ಒದಗಿಸಿರುವ ದಾಖಲೆಗಳಲ್ಲಿ ಆರೋಪಿತರ ಸಹಿ ಇಲ್ಲ ಎಂದರೆ ಸರಿಯಲ್ಲ. ನಿಪಿ-35 ನ್ನು ನಾನು ಪರಿಶೀಲಿಸಿದ್ದೇನೆ. ಎಇಇ ರವರು ಪೂರೈಸಿರುವ ನಕಾಶೆಯ ಸ್ಥಳಕ್ಕೆ ನಾನು ಭೇಟಿ ನೀಡಿಲ್ಲ. ಆದರೆ ನಕಾಶೆ ತಯಾರಿಸುವ ಕಾಲಕ್ಕೆ ಸಹಾಯಕ್ಕಾಗಿ ಚಾಸಾ-14 ಸಿಬ್ಬಂದಿಯನ್ನು ಕಳುಹಿಸಿರುತ್ತೇನೆ. ನಿಪಿ-33 ರ ಸ್ಥಳಕ್ಕೂ ಸಹ ನಾನು ಭೇಟಿ ನೀಡಿಲ್ಲ. ಆರೋಪಿತರ ವಿರುದ್ಧ ಯಾವುದೇ ಸಾಕ್ಷ್ಯಾಧಾರಗಳು ಲಭ್ಯವಿಲ್ಲದೇ ಇದ್ದರೂ ಸಹ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**